ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:	1289
ಸದಸ್ಯರ ಹೆಸರು:	ಶ್ರೀ ಪಿ.ಆರ್.ರಮೇಶ್
ಉತ್ತರಿಸುವ ದಿನಾಂಕ:	17-03-2020
ಉತ್ತರಿಸುವವರು:	ಪೌರಾಡಳಿತ, ತೋಟಗಾರಿಕೆ ಮತ್ತು ರೇಷ್ಮೆ ಸಚಿವರು

	ಪ್ರಶ್ನೆಗಳು	ಉತ್ತರ
ಅ	ರಾಜ್ಯದಲ್ಲಿ ಎಷ್ಟು ರೇಷ್ಮೆ ಗೂಡಿನ ಮಾರುಕಟ್ಟೆಗಳಿವೆ; ಇವುಗಳಲ್ಲಿ ಎಷ್ಟು ದೊಡ್ಡ ಮತ್ತು ಸಣ್ಣ ಮಾರುಕಟ್ಟೆಗಳು ಇವೆ; (ಜಿಲ್ಲಾವಾರು ಮಾಹಿತಿ ನೀಡುವುದು)	ರಾಜ್ಯದಲ್ಲಿ ಒಟ್ಟು 55 ರೇಷ್ಮೆ ಗೂಡಿನ ಮಾರುಕಟ್ಟೆಗಳು ಇರುತ್ತವೆ. ಇವುಗಳಲ್ಲಿ 4 ದೊಡ್ಡ ರೇಷ್ಮೆ ಗೂಡಿನ ಮಾರುಕಟ್ಟೆಗಳು, 51 ಸಣ್ಣ ರೇಷ್ಮೆ ಗೂಡಿನ ಮಾರುಕಟ್ಟೆಗಳಾಗಿವೆ. **(ಜಿಲ್ಲಾವಾರು ವಿವರ ಅನುಬಂಧದಲ್ಲಿ ನೀಡಿದೆ)**
ಆ	ಬೇರೆ ದೇಶ/ರಾಜ್ಯಗಳಿಂದ ರೇಷ್ಮೆಯನ್ನು ಆಮದು ಮಾಡಿಕೊಳ್ಳಲಾಗುತ್ತಿದೆಯೇ; ಇದ್ದಲ್ಲಿ, ಎಲ್ಲಿಂದ ಎಷ್ಟು ರೇಷ್ಮೆಯನ್ನು ವಾರ್ಷಿಕವಾಗಿ ಆಮದು ಮಾಡಿಕೊಳ್ಳಲಾಗುತ್ತಿದೆ; (ಮಾಹಿತಿ ನೀಡುವುದು)	ಕರ್ನಾಟಕ ರಾಜ್ಯಕ್ಕೆ ಬೇರೆ ದೇಶ/ ರಾಜ್ಯಗಳಿಂದ ರೇಷ್ಮೆ ಆಮದು ಮಾಡಿಕೊಳ್ಳಲಾಗುತ್ತಿಲ್ಲ. 2018-19 ನೇ ಸಾಲಿನಲ್ಲಿ ಕೇಂದ್ರ ರೇಷ್ಮೆ ಮಂಡಳಿಯ ವರದಿಯ ಪ್ರಕಾರ ಭಾರತಕ್ಕೆ ಒಟ್ಟಾರೆ ಕಚ್ಚಾ ರೇಷ್ಮೆ ಆಮದಿನ ಪ್ರಮಾಣ 2785 ಟನ್ ಗಳಷ್ಟಿರುತ್ತದೆ. ಇದು 3ಎ ಹಾಗೂ ಮೇಲ್ಪಟ್ಟ ದರ್ಜೆ ದ್ವಿತಳಿ ರೇಷ್ಮೆ ಆಗಿದ್ದು, ಚೀನಾ ಮತ್ತು ವಿಯಟ್ನಾಂ ದೇಶದಿಂದ ಆಮದು ಮಾಡಿಕೊಳ್ಳಲಾಗಿರುತ್ತದೆ.
ಇ	ರಾಜ್ಯದ ರೇಷ್ಮೆಯನ್ನು ಬೇರೆ ರಾಜ್ಯಗಳಿಗೆ / ದೇಶಗಳಿಗೆ ರಫ್ತು ಮಾಡಲಾಗುತ್ತಿದೆಯೇ; ಇದ್ದಲ್ಲಿ ವಾರ್ಷಿಕವಾಗಿ ಎಷ್ಟು ರೇಷ್ಮೆಯನ್ನು ರಫ್ತು ಮಾಡಲಾಗುತ್ತಿದೆ; (ವಿವರ ನೀಡುವುದು)	ದೇಶದ ವಿವಿಧ ರಾಜ್ಯಗಳಲ್ಲಿ ಕರ್ನಾಟಕ ರಾಜ್ಯದ ರೇಷ್ಮೆಯು ಬಳಕೆಯಾಗುತ್ತಿದ್ದು, ಈ ರಾಜ್ಯಗಳ ಕಚ್ಚಾ ರೇಷ್ಮೆಯ ಬಳಕೆಯ ನಿರ್ದಿಷ್ಟ ಅಂಕಿ-ಅಂಶ ಲಭ್ಯವಿರುವುದಿಲ್ಲ. ಆದರೆ, ಕರ್ನಾಟಕ ರಾಜ್ಯದಲ್ಲಿ ಉತ್ಪಾದನೆಯಾಗುವ ರೇಷ್ಮೆ ಬಳಕೆ ಇತರೆ ರಾಜ್ಯಗಳು ಶೇ.50-60 ರಷ್ಟಿದೆಯೆಂದು ಅಂದಾಜಿಸಲಾಗಿದೆ. 2018-19 ನೇ ಸಾಲಿನಲ್ಲಿ ರೇಷ್ಮೆ ನೂಲು, ಬಟ್ಟೆ ಸಿದ್ಧ ಉಡುಪುಗಳು, ನೆಲ ಹಾಸುಗಳು ಮತ್ತು ರೇಷ್ಮೆ ಜೂಟು ಒಳಗೊಂಡಂತೆ ದೇಶದ ರೇಷ್ಮೆ ಮತ್ತು ರೇಷ್ಮೆ ಉತ್ಪನ್ನಗಳ ರಫ್ತಿನ ಒಟ್ಟು ಮೌಲ್ಯ 291.36 ಮಿಲಿಯನ್ ಅಮೇರಿಕನ್ ಡಾಲರ್‌ನಷ್ಟಿದೆ. ಕೇಂದ್ರ ರೇಷ್ಮೆ ಮಂಡಳಿಯ ವರದಿಯ ಪ್ರಕಾರ ಇದರಲ್ಲಿ ರಾಜ್ಯದ ಪಾಲು ಶೇ.24 ರಷ್ಟಿರುತ್ತದೆ.
ಈ	ರೇಷ್ಮೆ ಮಾರುಕಟ್ಟೆ ಗುಣಮಟ್ಟವನ್ನು ಹೆಚ್ಚಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; ಹಾಗೂ ರೈತರಿಗೆ ನೀಡಲಾಗುತ್ತಿರುವ ಯೋಜನೆಗಳಾವುವು? (ಸಂಪೂರ್ಣ ಮಾಹಿತಿ ನೀಡುವುದು)	ರೇಷ್ಮೆ ಗೂಡಿನ ಮಾರುಕಟ್ಟೆಗಳ ಗುಣಮಟ್ಟ ಹೆಚ್ಚಿಸಲು ಈ ಕೆಳಕಂಡಂತೆ ಕ್ರಮವಹಿಸಲಾಗಿದೆ. ▪ ಶುದ್ಧ ಕುಡಿಯುವ ನೀರಿನ ಘಟಕ, ಶೌಚಾಲಯ ವ್ಯವಸ್ಥೆ, ತೂಕದಲ್ಲಿ ನಿಖರತೆಗಾಗಿ ಎಲೆಕ್ಟ್ರಾನಿಕ್ ತೂಕದ ಯಂತ್ರಗಳು, ಗೂಡುಗಳನ್ನು ತೂಕ ಮಾಡಲು 'ಹೆಚ್‌ಡಿಪಿಇ ಕ್ರೇಟ್'ಗಳ ಸೌಲಭ್ಯ, ಗೂಡುಗಳ ಶೇಖರಣೆಗಾಗಿ ಕಬ್ಬಿಣದ ಜಾಲರಿಗಳು, ರೇಷ್ಮೆ ಇಲಾಖೆಯಿಂದ ರೇಷ್ಮೆ ಬೆಳೆಗಾರರಿಗೆ ಒದಗಿಸಲಾಗುವ ಸವಲತ್ತುಗಳ/ ರೇಷ್ಮೆ ಕೃಷಿಯಲ್ಲಿ ಪಾಲಿಸಬೇಕಾದ ಮುನ್ನೆಚ್ಚರಿಕೆ ಕ್ರಮಗಳ ಡಿಸಪ್ಲೇ ಬೋರ್ಡ್, ಮುಂತಾದ ಮೂಲಭೂತ ಸೌಲಭ್ಯಗಳನ್ನು ಒದಗಿಸಲಾಗಿದೆ. ಮಾರುಕಟ್ಟೆಗೆ ಭದ್ರತಾ ಸಿಬ್ಬಂದಿ, ಸ್ವಚ್ಛತಾ ಸಿಬ್ಬಂದಿಗಳ ವ್ಯವಸ್ಥೆ ಒದಗಿಸಲಾಗಿದೆ. ▪ ರೇಷ್ಮೆ ಬೆಳೆಗಾರರು ಬೆಳೆದ ರೇಷ್ಮೆ ಗೂಡನ್ನು ಪಾರದರ್ಶಕವಾಗಿ ಮಾರಾಟ ಮಾಡಲು 10 ಮಾರುಕಟ್ಟೆಗಳಲ್ಲಿ ಇ-ಹರಾಜು ಪದ್ಧತಿಯನ್ನು ಅಳವಡಿಸಲಾಗಿದೆ. ▪ ಶ್ರೇಣಿಕರಣ/ವರ್ಗೀಕರಣ ಆಧಾರದ ಮೇಲೆ ರೇಷ್ಮೆ ಗೂಡಿನ ಮಾರುಕಟ್ಟೆಗಳಲ್ಲಿ ಗುಣಮಟ್ಟದ ರೇಷ್ಮೆ ಗೂಡಿಗೆ ಬೆಲೆ ನಿರ್ಧರಿಸಲು ಗೂಡು ಪರೀಕ್ಷಾ ಪ್ರಯೋಗಾಲಯಗಳನ್ನು ಸ್ಥಾಪಿಸಲಾಗುತ್ತಿದೆ. ಕನಕಪುರ ಮಾರುಕಟ್ಟೆಯಲ್ಲಿ ಗೂಡು ಪರೀಕ್ಷೆಯನ್ನು ಪ್ರಾರಂಭಿಸಲಾಗಿದೆ. ಕೊಳ್ಳೇಗಾಲ ಮತ್ತು ಚನ್ನಪಟ್ಟಣ

		ಮಾರುಕಟ್ಟೆಗಳಲ್ಲಿ ಪ್ರಾಯೋಗಿಕವಾಗಿ ಪ್ರಾರಂಭಿಸಲಾಗಿದೆ. ರಾಮನಗರ, ಶಿಡ್ಲಘಟ್ಟ, ಚಿಂತಾಮಣಿ, ಮತ್ತು ವಿಜಯಪುರ ಮಾರುಕಟ್ಟೆಗಳಲ್ಲಿ ರೇಷ್ಮೆ ಗೂಡು ಪರೀಕ್ಷೆಯನ್ನು ಪ್ರಾರಂಭಿಸಲು ಕ್ರಮವಹಿಸಲಾಗುತ್ತಿದೆ. ▪ ರೇಷ್ಮೆ ಗೂಡಿನ ಮೌಲ್ಯವನ್ನು ರೇಷ್ಮೆ ಬೆಳೆಗಾರರ ಬ್ಯಾಂಕ್ ಖಾತೆಗೆ ಜಮೆ ಮಾಡಲು ರಾಮನಗರ, ಕೋಲಾರ, ಕನಕಪುರ, ಶಿಡ್ಲಘಟ್ಟ ರೇಷ್ಮೆ ಗೂಡಿನ ಮಾರುಕಟ್ಟೆಗಳಲ್ಲಿ ಇ-ಹಣ ಪಾವತಿ ಪದ್ಧತಿಯನ್ನು ಪ್ರಾಯೋಗಿಕವಾಗಿ ಪ್ರಾರಂಭಿಸಲಾಗಿದೆ. ಸರ್ಕಾರವು ಈ ಕೆಳಕಂಡ ಸಹಾಯಧನ ಹಾಗೂ ಪ್ರೋತ್ಸಾಹಧನ ಸೌಲಭ್ಯಗಳನ್ನು ರೇಷ್ಮೆ ಬೆಳೆಗಾರರಿಗೆ ಒದಗಿಸಲಾಗುತ್ತಿದೆ. 1. ಸುಧಾರಿತ ಹಿಪ್ಪುನೇರಳೆ ತೋಟ ಬೆಳೆಯಲು, ನರ್ಸರಿ ಬೆಳೆಸಲು ಸಹಾಯಧನ ಹಾಗೂ ತಾಂತ್ರಿಕ ಮಾಹಿತಿ ಒದಗಿಸಲಾಗುತ್ತಿದೆ. 2. ಹಿಪ್ಪುನೇರಳೆ ತೋಟಕ್ಕೆ ಟ್ರಂಚಿಂಗ್ - ಮಲ್ಚಿಂಗ್ ಮಾಡಲು ಸಹಾಯಧನ ಹಾಗೂ ತಾಂತ್ರಿಕ ಮಾಹಿತಿ. 3. ಹಿಪ್ಪುನೇರಳೆ ತೋಟಕ್ಕೆ ಹನಿ ನೀರಾವರಿ ಅಳವಡಿಕೆಗೆ ಶೇ.90ರಷ್ಟು ಸಹಾಯಧನ. 4. ಹಿಪ್ಪುನೇರಳೆ ತೋಟದ ಮಣ್ಣಿನ ಫಲವತ್ತತೆಗಾಗಿ ಜೈವಿಕಗೊಬ್ಬರ ಬಳಕೆ, ಹಿಪ್ಪುನೇರಳೆ ಸೊಪ್ಪಿನ ಇಳುವರಿ ಹಾಗೂ ಗುಣಮಟ್ಟ ಹೆಚ್ಚಿಸುವ ಸಲುವಾಗಿ ಸಸ್ಯ ಸಂವರ್ಧಕ ಹಾಗೂ ಬೇರು ಕೊಳೆ ನಿಯಂತ್ರಣಕ್ಕಾಗಿ ಸಹಾಯಧನ. 5. ಹಿಪ್ಪುನೇರಳೆ ಮರ ಕೃಷಿ ಪದ್ಧತಿ ಉತ್ತೇಜನಕ್ಕಾಗಿ ಸಹಾಯಧನ. 6. ರೇಷ್ಮೆ ಹುಳು ಸಾಕಾಣಿಕೆ ಮನೆ/ಮೌಂಟಿಂಗ್ ಹಾಲ್ ನಿರ್ಮಾಣಕ್ಕೆ ಸಹಾಯಧನ. 7. ಸೋಂಕು ನಿವಾರಕಗಳ ಪೂರೈಕೆ ಮತ್ತು ಸಲಕರಣೆಗಳಿಗೆ ಸಹಾಯಧನ ಹಾಗೂ ತಾಂತ್ರಿಕ ಮಾಹಿತಿ. 8. ರೋಟರಿ ಚಂದ್ರಿಕೆಗಳ ಖರೀದಿಗೆ ಸಹಾಯಧನ 9. ದ್ವಿತಳಿ ಚಾಕಿ ವೆಚ್ಚಕ್ಕೆ ಸಹಾಯಧನ. 10. ಚಾಕಿ ಸಾಕಾಣಿಕಾ ಕೇಂದ್ರದ ಸ್ಥಾಪನೆಗೆ / ಸಲಕರಣೆಗಳಿಗೆ ಸಹಾಯಧನ. 11. ನೂತನ ತಾಂತ್ರಿಕತೆಗಳ ಅಳವಡಿಕೆಗೆ ರೈತರಿಗೆ ತರಬೇತಿ ಮತ್ತು ಕಾರ್ಯಾಗಾರ. 12. ರೇಷ್ಮೆ ಗೂಡಿನ ಧಾರಣೆ ಕುಸಿತ ಸಂದರ್ಭದಲ್ಲಿ ರೇಷ್ಮೆ ಬೆಳೆಗಾರರಿಗೆ ರಕ್ಷಣಾತ್ಮಕ ದರ ನೀಡಲಾಗುತ್ತಿದೆ. 13. ದ್ವಿತಳಿ ಬಿತ್ತನೆ ಬೆಳೆಗಾರರು ಹಾಗೂ ಮೈಸೂರು ಬಿತ್ತನೆ ಬೆಳೆಗಾರರು ಬೆಳೆಯುವ ಬಿತ್ತನೆ ಗೂಡಿಗೆ ಪ್ರೋತ್ಸಾಹಧನ / ಬೋನಸ್ ನೀಡಲಾಗುತ್ತಿದೆ. 14. ರೇಷ್ಮೆ ಬಿತ್ತನೆ ಬೆಳೆಗಾರರಿಗೆ ಉತ್ಪಾದಕತೆ ಮತ್ತು ಗುಣಮಟ್ಟ ಆಧರಿಸಿ ಬಿತ್ತನೆ ಗೂಡಿಗೆ ಪ್ರೋತ್ಸಾಹಧನ ನೀಡಲಾಗುತ್ತಿದೆ. 15. ಉತ್ತರ ಕರ್ನಾಟಕ ಜಿಲ್ಲೆಗಳಲ್ಲಿ ಉತ್ಪಾದಿಸುವ ದ್ವಿತಳಿ ರೇಷ್ಮೆ ಗೂಡಿಗೆ ಕೆ.ಜಿ.ಗೆ ರೂ.10/-ರಂತೆ ಸಾಗಾಣಿಕೆ ವೆಚ್ಚ.

ರೇಷ್ಮೆ 40 ರೇಕ್ರುವಿ 2020

(ನಾರಾಯಣ ಗೌಡ)
ಪೌರಾಡಳಿತ, ತೋಟಗಾರಿಕೆ ಮತ್ತು
ರೇಷ್ಮೆ ಸಚಿವರು

ವಿಧಾನ ಪರಿಷತ್ ಪ್ರಶ್ನೆ ಸಂಖ್ಯೆ1289 ಕ್ಕೆ ಅನುಬಂಧ

ಕ್ರ. ಸಂ	ಜಿಲ್ಲೆ	ತಾಲ್ಲೂಕು	ಕ್ರ.ಸಂ	ಮಾರುಕಟ್ಟೆ ಹೆಸರು
ದೊಡ್ಡ ರೇಷ್ಮೆ ಗೂಡಿನ ಮಾರುಕಟ್ಟೆಗಳು (ದಿನವಹಿ 10 ರಿಂದ 40 ಮೆ.ಟನ್ ವಹಿವಾಟು)				
1	ರಾಮನಗರ	ರಾಮನಗರ	1	ರಾಮನಗರ
2	ಚಿಕ್ಕಬಳ್ಳಾಪುರ	ಶಿಡ್ಲಘಟ್ಟ	2	ಶಿಡ್ಲಘಟ್ಟ
3	ರಾಮನಗರ	ಕನಕಪುರ	3	ಕನಕಪುರ
4	ಚಾಮರಾಜನಗರ	ಕೊಳ್ಳೇಗಾಲ	4	ಕೊಳ್ಳೇಗಾಲ
ಸಣ್ಣ ರೇಷ್ಮೆ ಗೂಡಿನ ಮಾರುಕಟ್ಟೆಗಳು (ದಿನವಹಿ 10ಮೆ.ಟನ್ ಕ್ಕಿಂತ ಕಡಿಮೆ ವಹಿವಾಟು)				
1	ಬೆಂಗಳೂರು ಗ್ರಾಮಾಂತರ	ದೇವನಹಳ್ಳಿ	1	ವಿಜಯಪುರ
2	ಬಾಗಲಕೋಟೆ	ಮುಧೋಳ	2	ಮುಧೋಳ
		ಹುನಗುಂದ	3	ಇಳಕಲ್
3	ಬೆಳಗಾಂ	ಅಥಣಿ	4	ಅಥಣಿ
		ಗೋಕಾಕ್	5	ಗೋಕಾಕ್
4	ಬಳ್ಳಾರಿ	ಕೂಡ್ಲಿಗಿ	6	ಕೂಡ್ಲಿಗಿ
5	ಬೀದರ್	ಹುಮ್ನಾಬಾದ್	7	ಹುಮ್ನಾಬಾದ್
6	ಬಿಜಾಪುರ	ಬಿಜಾಪುರ	8	ಬಿಜಾಪುರ
7	ಚಾಮರಾಜನಗರ	ಚಾಮರಾಜನಗರ	9	ಚಾಮರಾಜನಗರ
		ಚಾಮರಾಜನಗರ	10	ಸಂತೆಮರಹಳ್ಳಿ
		ಚಾಮರಾಜನಗರ	11	ಹರವೆ
		ಕೊಳ್ಳೇಗಾಲ	12	ಹನೂರು
8	ಮೈಸೂರು	ಮೈಸೂರು	13	ಮೈಸೂರು
		ಟಿ. ನರಸೀಪುರ	14	ಟಿ. ನರಸೀಪುರ
9	ಚಿಕ್ಕಬಳ್ಳಾಪುರ	ಚಿಕ್ಕಬಳ್ಳಾಪುರ	15	ಚಿಕ್ಕಬಳ್ಳಾಪುರ
		ಚಿಂತಾಮಣಿ	16	ಚಿಂತಾಮಣಿ
		ಶಿಡ್ಲಘಟ್ಟ	17	ಹೆಚ್. ಕ್ರಾಸ್
10	ದಕ್ಷಿಣ ಕನ್ನಡ	ಬಂಟ್ವಾಳ	18	ಬಿ.ಸಿ.ರೋಡ್
11	ದಾವಣಗೆರೆ	ದಾವಣಗೆರೆ	19	ದಾವಣಗೆರೆ
12	ಧಾರವಾಡ	ದಾರವಾಡ	20	ರಾಯಾಪುರ
13	ಗದಗ	ಶಿರಹಟ್ಟಿ	21	ಶಿರಹಟ್ಟಿ
14	ಗುಲ್ಬರ್ಗ	ಗುಲ್ಬರ್ಗ	22	ಗುಲ್ಬರ್ಗ
		ಜೇವರ್ಗಿ	23	ಜೇವರ್ಗಿ
15	ಕೋಲಾರ	ಕೋಲಾರ	24	ಕೋಲಾರ
		ಕೋಲಾರ	25	ಕ್ಯಾಲನೂರು
		ಶ್ರೀನಿವಾಸಪುರ	26	ಶ್ರೀನಿವಾಸಪುರ
		ಮುಳಬಾಗಿಲು	27	ಮುಳಬಾಗಿಲು
16	ಮಂಡ್ಯ	ಮಳವಳ್ಳಿ	28	ಮಳವಳ್ಳಿ
17	ರಾಮನಗರ	ಚನ್ನಪಟ್ಟಣ	29	ಚನ್ನಪಟ್ಟಣ
		ಮಾಗಡಿ	30	ಮಾಗಡಿ
			31	ಕುದೂರು
			32	ಸೋಲೂರು
			33	ವೀರೇಗೌಡನದೊಡ್ಡಿ
18	ರಾಯಚೂರು	ಲಿಂಗಸೂಗೂರು	34	ಲಿಂಗಸೂಗೂರು
19	ಹಾವೇರಿ	ಹಾವೇರಿ	35	ಹಾವೇರಿ
20	ಬೆಂಗಳೂರು ನಗರ	ಬೆಂಗಳೂರು ಉತ್ತರ	36	ಬೆಂಗಳೂರು
		ಆನೇಕಲ್	37	ಸರ್ಜಾಪುರ
		ಆನೇಕಲ್	38	ಅತ್ತಿಬೆಲೆ
21	ಬೆಳಗಾಂ	ಬೆಳಗಾಂ	39	ಬೆಳಗಾಂ
22	ಹಾಸನ	ಹಾಸನ	40	ಹಾಸನ
23	ಕೊಡಗು	ಸೋಮವಾರಪೇಟೆ	41	ಕುಶಾಲನಗರ
24	ಮಂಡ್ಯ	ಕೆ.ಆರ್.ಪೇಟೆ	42	ಕೆ.ಆರ್.ಪೇಟೆ
25	ಶಿವಮೊಗ್ಗ	ಶಿವಮೊಗ್ಗ	43	ಶಿವಮೊಗ್ಗ
26	ತುಮಕೂರು	ತುಮಕೂರು	44	ತುಮಕೂರು
		ತುಮಕೂರು	45	ಹೆಬ್ಬೂರು
		ಕುಣಿಗಲ್	46	ಕುಣಿಗಲ್
		ಕುಣಿಗಲ್	47	ಸಂತೆಮಾವತ್ತೂರು
			48	ಕೆಂಪನಹಳ್ಳಿ
			49	ಹುಲಿಯೂರುದುರ್ಗ
			50	ಚೌಡನಕುಪ್ಪೆ
27	ಉತ್ತರ ಕನ್ನಡ	ಶಿರಸಿ	51	ಶಿರಸಿ